2017 ಕ.ತೀ.ವ 122

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ ಗೌಡ

## ದೊಡ್ಡತಾಯಮ್ಮ ಮತ್ತು ಮತ್ತೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ ಹೆಚ್.ಡಿ. ಕೋಟೆ, ಪೊಲೀಸ್ ಮೂಲಕ*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ 374(2)ನೇ ಪ್ರಕರಣ.

ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಳ್ಳಲು ಚಿತಾವಣೆ ಮಾಡಿ ಹಲ್ಲೆ ನಡೆಸಿರುತ್ತಾರೆಂಬ ಆರೋಪದ ಮೇಲೆ ಅಧೀನ ನ್ಯಾಯಾಲಯವು ಭಾರತೀಯ ದಂಡ ಸಂಹಿತೆ, 1860ರ 306ನೇ ಪ್ರಕರಣದ ಅಡಿಯಲ್ಲಿ ನಾಲ್ಕು ವರ್ಷಗಳ ಸಾದಾ ಜೈಲು ಶಿಕ್ಷೆ ಹಾಗೂ ರೂ.2000/–ಗಳ ಜುಲ್ಮಾನೆಯನ್ನು ವಿಧಿಸಿ ನೀಡಿದ ನಿರ್ಣಯವನ್ನು ಪ್ರಶ್ನಿಸಿ ಪ್ರಸ್ತುತ ಕ್ರಿಮಿನಲ್ ಅಪೀಲು ಸಲ್ಲಿಕೆ.

ಈ ಪ್ರಕರಣದಲ್ಲಿ 1 ರಿಂದ 5,7, 14ನೇ ಆರೋಪಿಗಳನ್ನು ಖುಲಾಸೆಗೊಳಿಸಿದ್ದು 6 ಮತ್ತು 13ನೇ ಆಪಾದಿತರನ್ನು ಶಿಕ್ಷೆಗೆ ಗುರಿಪಡಿಸಲಾಯಿತು. ಇವರು ಆ ಘಟನೆಯಲ್ಲಿ ವಹಿಸಿದ ಪಾತ್ರವನ್ನು ದೃಢೀಕರಿಸುವ ಸಾಕ್ಷ್ಯವು ಇಲ್ಲದಿರುವುದರಿಂದ ಹಾಗೂ ಅಪೀಲುದಾರರಿಗೆ ಸಂಶಯ ಲಾಭದ ಹಕ್ಕು ಇರುವುದರಿಂದ, ಸದರಿ ಕೃತ್ಯಕ್ಕೆ ಚಿತಾವಣೆ ಮಾಡಿರುವುದನ್ನು ಸಕಾರಾತ್ಮಕವಾಗಿ ನಿರೂಪಿಸದಿರುವುದರಿಂದ ಅಧೀನ ನ್ಯಾಯಾಲಯವು ನೀಡಿದ ಶಿಕ್ಷೆ ಹಾಗೂ ಜುಲ್ಮಾನೆಯ ಆದೇಶವನ್ನು ತಳ್ಳಿಹಾಕಿದ ಮಾನ್ಯ ಉಚ್ಚ ನ್ಯಾಯಾಲಯವು ಸದರಿ ಅಪೀಲನ್ನು ಪುರಸ್ಕರಿಸಿದೆ.

*ಕ್ರಿಮಿನಲ್ ಅಪೀಲು ಸಂ. 276/2010, ದಿನಾಂಕ: 22ನೇ ಫೆಬ್ರವರಿ, 2016.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
|---|---|
| *1. 1995 ಎಸ್‌ಯುಪಿಪಿ(3) ಎಸ್‌ಸಿಸಿ 731<br>ಮಹೇಂದ್ರ ಸಿಂಗ್ ಮತ್ತು ಮತ್ತೊಬ್ಬರು<br>-ವಿರುದ್ಧ- ಮಧ್ಯಪ್ರದೇಶ ರಾಜ್ಯ* | *(ಉಲ್ಲೇ) 5* |
| *2. (2001) 9 ಎಸ್‌ಸಿಸಿ 618<br>ರಮೇಶ್ ಕುಮಾರ್ -ವಿರುದ್ಧ - ಛತ್ತೀಸ್‌ಗಡ ರಾಜ್ಯ* | *(ಉಲ್ಲೇ) 5* |
| *3. (2009) 11 ಸ್ಕೇಲ್ 24<br>ಚಿತ್ರೇಶ್ ಕುಮಾರ್ ಚೋಪ್ರಾ -ವಿರುದ್ಧ- ರಾಜ್ಯ<br>(ದೆಹಲಿಯ ಎನ್‌ಸಿಟಿ ಸರ್ಕಾರ)* | *(ಉಲ್ಲೇ) 5* |
| *4. (1994) 1 ಎಸ್‌ಸಿಸಿ 73<br>ಪಶ್ಚಿಮ ಬಂಗಾಳ ರಾಜ್ಯ -ವಿರುದ್ಧ-<br>ಓರಿಲಾಲ್ ಜೈಸ್ವಾಲ್ ಮತ್ತು ಮತ್ತೊಬ್ಬರು* | *(ಉಲ್ಲೇ) 5* |
| *5. 2007 (10) ಎಸ್‌ಸಿಸಿ 797<br>ಕಿಶೋರಿ ಲಾಲ್ -ವಿರುದ್ಧ- ಮಧ್ಯಪ್ರದೇಶ ರಾಜ್ಯ* | *(ಉಲ್ಲೇ) 10* |
| *6. (2004) 13 ಎಸ್‌ಸಿಸಿ 129<br>ರಣಧೀರ್ ಸಿಂಗ್ ಮತ್ತು ಇನ್ನೊಬ್ಬರು<br>-ವಿರುದ್ಧ- ಪಂಜಾಬ್ ರಾಜ್ಯ* | *(ಉಲ್ಲೇ) 11* |
| *7. (2010) 1ಎಸ್‌ಸಿಸಿ 707<br>ಅಮಲೇಂಡು ಪಾಲ್ ಅಲಿಯಾಸ್ ಜಂತು<br>-ವಿರುದ್ಧ- ಪಶ್ಚಿಮ ಬಂಗಾಳ ರಾಜ್ಯ* | *(ಉಲ್ಲೇ) 12* |
| *8. 2011 ಕ್ರಿಮಿನಲ್ ಎಲ್.ಜೆ. 1900<br>ಎಂ. ಮೋಹನ್ -ವಿರುದ್ಧ- ರಾಜ್ಯ* | *(ಉಲ್ಲೇ) 13* |

ಅಪೀಲುದಾರರ ಪರ: ಮೆಸರ್ಸ್ ಪಿ. ನಟರಾಜು ಅಸೋಷಿಯೇಟ್ಸ್, ಶ್ರೀ ಪಿ. ನಟರಾಜು, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಬಿ. ವಿಶ್ವೇಶ್ವರಯ್ಯ, ಹೆಚ್.ಸಿ.ಜಿ.ಪಿ, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲ್ ಗೌಡ:**

ಅಪೀಲುದಾರರು ಮೈಸೂರಿನಲ್ಲಿರುವ ಜಿಲ್ಲಾ ಮತ್ತು ಸತ್ರ IVನೇ ಹೆಚ್ಚುವರಿ ನ್ಯಾಯಾಧೀಶರು ಎಸ್.ಸಿ.ಸಂ.316/2007 ರಲ್ಲಿ ಹೊರಡಿಸಿದ ದಿನಾಂಕ 01.03.2010 ರ ಅಪರಾಧ ನಿರ್ಣಯ ಮತ್ತು ಶಿಕ್ಷೆಯ ಆದೇಶದ ತೀರ್ಪಿನ ಕಾನೂನು ಸಮ್ಮತತೆಯನ್ನು ಪ್ರಶ್ನಿಸಿದ್ದಾರೆ. ಸದರಿ ತೀರ್ಪಿನ ಮೂಲಕ ಅಪೀಲುದಾರರು ಭಾರತ ದಂಡ ಸಂಹಿತೆಯ ಪ್ರಕರಣ 114 ರೊಂದಿಗೆ ಓದಲಾದ 306ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಅಪೀಲುದಾರರ ಅಪರಾಧ ನಿರ್ಣಯ ಮಾಡಲಾಗಿತ್ತು ಮತ್ತು 4 ವರ್ಷಗಳ ಅವಧಿಯ ಕಾರಾವಾಸ ಶಿಕ್ಷೆಯನ್ನು ಮತ್ತು 2,000/– ರೂ ಗಳ ಜುಲ್ಮಾನೆಯನ್ನು ಪ್ರತಿಯೊಬ್ಬರೂ ಸಂದಾಯಮಾಡುವ ಶಿಕ್ಷೆ ವಿಧಿಸಲಾಗಿತ್ತು ದಂಡವನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಪ್ರತಿಯೊಬ್ಬರೂ ಒಂದು ತಿಂಗಳ ಹೆಚ್ಚಿನ ಅವಧಿಗೆ ಸಾದಾ ಕಾರಾವಾಸ ಶಿಕ್ಷೆಗೊಳಿಸುವ ಶಿಕ್ಷೆ ವಿಧಿಸಲಾಗಿತ್ತು.

2. ಈ ಅಪೀಲಿನ ಪರಿಗಣನೆಗೆ ಮತ್ತು ವಿಲೇವಾರಿಗೆ ಅಗತ್ಯವಾದ ಸಂಗತಿಗಳನ್ನು ಪ್ರಾಸಿಕ್ಯೂಷನ್ನು ಮಂಡಿಸಿದ ಹಾಗೆ ಈ ಮುಂದಿನಂತೆ ತಿಳಿಸಲಾಗಿದೆ.

ಶ್ರೀ ರಾಮಚಂದ್ರ ಇವರ (ಪ್ರಾಸಾ 1) ಹೆಂಡತಿಯಾದ ಶ್ರೀಮತಿ ಪದ್ಮಮ್ಮ ಹಾರೋಪುರ ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘದ (ಸಂಕ್ಷಿಪ್ತತೆಗಾಗಿ 'ಸಂಘ') ಕಾರ್ಯದರ್ಶಿಯಾಗಿದ್ದರು. ಈಕೆಯನ್ನು ಸಂಘದ ನಿರ್ವಹಣಾ ಸಮಿತಿಯು 14.02.2004 ರಂದು ಕರ್ತವ್ಯದಿಂದ ಅಮಾನತುಗೊಳಿಸಲಾಗಿತ್ತು. ಅಮಾನತು

ಆದೇಶವನ್ನು ಹುಣಸೂರಿನಲ್ಲಿರುವ ಸಹಕಾರಿ ಸಂಘಗಳ ಸಹಾಯಕ ನೋಂದಣಾಧಿಕಾರಿಯ ಮುಂದೆ ಪ್ರಶ್ನಿಸಲಾಗಿತ್ತು ಮತ್ತು ತಡೆಯಾಜ್ಞೆಯನ್ನು ಹೊರಡಿಸಲಾಗಿತ್ತು. ಇದಾದನಂತರ, ಪದ್ಮಮ್ಮನು ಕರ್ತವ್ಯಕ್ಕೆ ಹಾಜರಾಗಲು ಸಂಘಕ್ಕೆ ಹೋಗಿದ್ದರು, ಸಂಘದ ನಿರ್ದೇಶಕರುಗಳು ಮತ್ತು ಉದ್ಯೋಗಿಗಳಾಗಿರುವ ಆಪಾದಿತರು ಕರ್ತವ್ಯಕ್ಕೆ ಹಾಜರಾಗಲು ಆಕೆಯನ್ನು ಬಿಡಲಿಲ್ಲ. 01.04.2007 ರಂದು, ಎಲ್ಲಾ ಆರೋಪಿಗಳು ಪದ್ಮಮ್ಮನನ್ನು ನಿಂದಿಸಿದ್ದಾರೆ ಮತ್ತು ಆಪಾದಿತ ನಂ.13 ಶಂಸದ್ ಬೇಗಂ, ಆಪಾದಿತ ಸಂ.6 ದೊಡ್ಡ ತಾಯಮ್ಮನನ್ನು ಪದ್ಮಮ್ಮನನ್ನು ಥಳಿಸುವಂತೆ ಚಿತಾವಣೆಗೊಳಿಸಿದ್ದಾಳೆ ಮತ್ತು ತದನುಸಾರವಾಗಿ ದೊಡ್ಡತಾಯಮ್ಮನು (ಆ–6) ಪದ್ಮಮ್ಮಳ ಮುಖಕ್ಕೆ ಉಗಿದಿದ್ದಾಳೆ ಮತ್ತು ಹಾಲಿನ ಡಬ್ಬದಿಂದ ಅವಳಿಗೆ ಹೊಡೆದು ಅಪಮಾನಗೊಳಿಸಿದ್ದಾಳೆ. 02.04.2007 ರಂದು, ಬೆಳಗಿನ ಹೊತ್ತು ಮತ್ತು ಸಾಯಂಕಾಲವೂ ಕೂಡ ಉತ್ಪಾದಕರಿಂದ ಹಾಲನ್ನು ಪಡೆದುಕೊಳ್ಳಲು ಸಂಘದ ಅಧ್ಯಕ್ಷರಾದ ಶ್ರೀಮತಿ ನಾಗಮ್ಮನು (ಆ–1) ಸಂಬಂಧಪಟ್ಟ ವಹಿಯನ್ನು (ರಿಜಿಸ್ಟರ್) ನೀಡಿರಲಿಲ್ಲ, ಮತ್ತು ಎಲ್ಲಾ ಆಪಾದಿತರು ಅವಾಚ್ಯ ಶಬ್ದ ಮತ್ತು ಅಸಭ್ಯ ಭಾಷೆಯಲ್ಲಿ ಪದ್ಮಮ್ಮನನ್ನು ನಿಂದಿಸಿದ್ದಾರೆ. ಆಪಾದಿತರು ಅಪಮಾನಗೊಳಿಸಿದ ಕಾರಣದಿಂದ ದಿನಾಂಕ 03.04.2007 ರಂದು ಬೆಳಿಗ್ಗೆ ಸುಮಾರು 5.30 ರಲ್ಲಿ ಪದ್ಮಮ್ಮನು ನೇಣುಹಾಕಿಕೊಂಡು ಸಂಘದ ಮುಂದೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಗ್ರಾಮದ ಕೆಲವು ಮಕ್ಕಳು ಇದನ್ನು ಗಮನಿಸಿ ಅವಳ ಗಂಡನಿಗೆ (ಪ್ರಾಸಾ–1) ಸಂಗತಿಯನ್ನು ತಿಳಿಸಿದ್ದಾರೆ. ನಿಶಾನೆ ಪಿ2 ರ ಪ್ರಕಾರ ದೂರನ್ನು ದಾಖಲಿಸಲಾಗಿತ್ತು ಮತ್ತು ಭಾರತ ದಂಡ ಸಂಹಿತೆಯ 143, 302, 114 ಮತ್ತು 149 ನೇ ಪ್ರಕರಣಗಳ ಮೇರೆಗಿನ ಅಪರಾಧಗಳಿಗಾಗಿ ಅಪರಾಧ ಸಂ.66/2007 ರಲ್ಲಿ ಪ್ರ.ಮಾ.ವ/ ನಿಶಾನೆ ಪಿ9 ನ್ನು ನೋಂದಾಯಿಸಲಾಗಿತ್ತು. ತನಿಖೆಯನ್ನು ನಡೆಸಿದ ನಂತರ ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 306, 114ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳಿಗಾಗಿ 14 ಆಪಾದಿತರ ವಿರುದ್ಧ ಎಚ್.ಡಿ.ಕೋಟೆಯಲ್ಲಿರುವ ಜೆ.ಎಂ.ಎಫ್.ಸಿ ಗೆ ಆರೋಪ ಪಟ್ಟಿಯನ್ನು ಸಲ್ಲಿಸಲಾಗಿತ್ತು. ಪ್ರಕರಣವನ್ನು ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಲಾಗಿತ್ತು. ಆಪಾದಿತರು ಹಾಜರಾಗಿದ್ದು, ಆರೋಪವನ್ನು ಓದಲಾಗಿದ್ದು ಅವರು ತಪ್ಪಿತಸ್ಥರಲ್ಲವೆಂದು ವಾದಿಸಿದ್ದಾರೆ ಮತ್ತು ಅಧಿವಿಚಾರಣೆಯನ್ನು ಕ್ಲೇಮು ಮಾಡಿದ್ದಾರೆ.

3. ಅಧಿವಿಚಾರಣೆಯ ಅವಧಿಯಲ್ಲಿ 16 ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿತ್ತು. ಪ್ರತಿವಾದದ ಕಡೆಯಿಂದ 3 ಸಾಕ್ಷಿದಾರರನ್ನು ವಿಚಾರಣೆ ಮಾಡಲಾಗಿತ್ತು. ಸಾಕ್ಷ್ಯವು ಮುಗಿದ ತರವಾಯ, ಆಪಾದಿತರನ್ನು ದಂಡ ಪ್ರಕ್ರಿಯಾ ಸಂಹಿತೆಯ 313ನೇ ಪ್ರಕರಣದ ಮೇರೆಗೆ ಪ್ರಶ್ನಿಸಲಾಗಿತ್ತು. ಆಪಾದಿತರು ಅವರ ವಿರುದ್ಧ ಪ್ರಾಸಿಕ್ಯೂಷನ್ ಸಾಕ್ಷಿದಾರರು ಮಾಡಿದ ಆರೋಪಿತ ಹೇಳಿಕೆಗಳನ್ನು ಪ್ರಶ್ನಿಸಿದ್ದರು. ಅಧಿವಿಚಾರಣೆ ಮುಗಿದ ನಂತರ ಹಿಂದೆ ಹೇಳಲಾದ ತೀರ್ಪಿನ ಮೂಲದ ಅಧಿವಿಚಾರಣಾ ನ್ಯಾಯಾಲಯವು ಆಪಾದಿತ ಸಂ.1 ರಿಂದ 5, 7 ರಿಂದ 12 ರ ವರೆಗೆ ಮತ್ತು 14 ಎಂದರೆ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳನ್ನು ಭಾರತ ದಂಡ ಸಂಹಿತೆಯ 149ನೇ ಪ್ರಕರಣದೊಂದಿಗೆ ಓದಲಾದ 143, 306ನೇ ಪ್ರಕರಣಗಳ ಮೇರೆಗೆ ದಂಡಿಸಬಹುದಾದ ಅಪರಾಧಗಳನ್ನು ಅಧಿವಿಚಾರಣಾ ನ್ಯಾಯಾಲಯವು ಖುಲಾಸೆಗೊಳಿಸಿತ್ತು. ಆದಾಗ್ಯೂ, 6 ಮತ್ತು 13ನೇ ಸಂಖ್ಯೆಯ ಅಪಾದಿತರು ಎಂದರೆ ಅನುಕ್ರಮವಾಗಿ ಸಂಘದ ಹಾಲು ಪರೀಕ್ಷಕ ಮತ್ತು ಕಾರ್ಯದರ್ಶಿಯವರನ್ನು ಭಾರತ ದಂಡ ಸಂಹಿತೆಯ 114ನೇ ಪ್ರಕರಣದೊಂದಿಗೆ ಓದಲಾದ 306ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧಕ್ಕಾಗಿ ಅಪರಾಧಿಗಳೆಂದು ನಿರ್ಣಯಿಸಲಾಗಿತ್ತು ಮತ್ತು ಹಿಂದೆ ಹೇಳಲಾದಂತೆ ಶಿಕ್ಷೆಗೊಳಪಡಿಸಲಾಗಿತ್ತು. ಅಪರಾಧ ನಿರ್ಣಯದ ಸದರಿ ತೀರ್ಪು ಮತ್ತು ಶಿಕ್ಷೆಯ ಆದೇಶದ ವಿರುದ್ಧ ಈ ಅಪೀಲನ್ನು ಹೂಡಲಾಗಿದೆ.

4. ಮಾನ್ಯ ವಕೀಲರಾದ ಶ್ರೀ.ಪಿ. ನಟರಾಜುರವರು, ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯದ ಮೂಲಕ ಸವಿವರವಾಗಿ ಈ ನ್ಯಾಯಾಲಯದ ಗಮನಕ್ಕೆ ತಂದು ಭಾರತ ದಂಡ ಸಂಹಿತೆಯ 114ನೇ ಪ್ರಕರಣದೊಂದಿಗೆ ಓದಲಾದ 306ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಅಪರಾಧದ ತಪ್ಪಿತಸ್ಥರಾದ ಅಪೀಲುದಾರರ ಸುನಾವಣೆ ನಡೆಸಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪು ಕಲ್ಪನೆಯನ್ನು ಆಧರಿಸಿದೆಯೆಂದು ಸಂಪೂರ್ಣವಾಗಿ ಅಸಮಂಜಸವಾಗಿದೆಯೆಂದು ಮತ್ತು ಅನುಮಾನಾಸ್ಪದವಾಗಿದೆಯೆಂದು ಒಪ್ಪಿಸಿದ್ದಾರೆ. ಅಪೀಲುದಾರರ ವಿರುದ್ಧ ಮಾಡಲಾದ ಆರೋಪವನ್ನು ಸಮರ್ಥಿಸಲು ಯಾವುದೇ ಸಾಕ್ಷ್ಯವಿಲ್ಲವೆಂದು ನಿವೇದಿಸಿದ್ದಾರೆ. ಮಾನ್ಯ ವಕೀಲರು, ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು

ಸಂಪೂರ್ಣವಾಗಿ ತಪ್ಪಾಗಿ ಅರ್ಥೈಸಲಾಗಿದೆಯೆಂದು ಮತ್ತು ಅಧಿವಿಚಾರಣಾ ನ್ಯಾಯಾಧೀಶರು ಬೇರೆ ಕಾರಣ ನೀಡುವ ಮೂಲಕ ಅಪೀಲುದಾರರನ್ನು ತಪ್ಪಿತಸ್ಥರಾಗಿ ಮಾಡಿದ್ದಾರೆಂದು, ಆದರೂ ಅಪೀಲುದಾರರು ಆರೋಪಿತ ಅಪರಾಧವನ್ನು ಮಾಡಿರುವರೆಂಬ ತೀರ್ಮಾನಕ್ಕೆ ಬರಲು ಸಾಕಷ್ಟು ಸಾಕ್ಷ್ಯವಿಲ್ಲವೆಂದು ವಾದಿಸಿದ್ದಾರೆ. ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳಲು ದುಷ್ಪ್ರೇರಣೆಯಾದುದನ್ನು ರುಜುವಾತುಪಡಿಸಲು ಸಮರ್ಪಕ ಮತ್ತು ನಂಬಲರ್ಹ ಸಾಕ್ಷ್ಯಗಳಿಲ್ಲದಿರುವುದರಿಂದ ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗಿನ ಅಪೀಲುದಾರರ ಅಪರಾಧ ನಿರ್ಣಯವನ್ನು ತಳ್ಳಿಹಾಕಲು ಹೊಣೆಯಾಗಿದೆಯೆಂದು ನಿವೇದಿಸಿದ್ದಾರೆ. ಅವನು ಅಪೀಲುದಾರರು ಮೃತರಿಗೆ ಯಾವುದೇ ಗಾಯವನ್ನು ಮಾಡುವ ಅಥವಾ ಉದ್ದೇಶಪೂರ್ವಕ ನಿಂದನೆ ಮಾಡಿರುವುದಕ್ಕೆ ಎಂದರೆ ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳಲು ನಿಕಟಪೂರ್ವ ಸಾಕ್ಷ್ಯ ಇಲ್ಲವೆಂದು ನಿವೇದಿಸಿದ್ದು ಇದರಿಂದ ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳಲು ಅಪೀಲುದಾರರು ಕಾರಣರಾಗಿದ್ದಾರೆಂದು ಹೇಳಲು ಸಾಧ್ಯವಿಲ್ಲವೆಂದು ನಿವೇದಿಸಿದ್ದಾರೆ.

5. ಅಪೀಲುದಾರರ ಪ್ರಕರಣವನ್ನು ಸಮರ್ಥಿಸಲು ಶ್ರೀ ಪಿ. ನಟರಾಜುರವರು ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ನಿರ್ಣಯವನ್ನು ಆಧರಿಸಿದ್ದು, ಇದರಲ್ಲಿ ಈ ಮುಂದಿನಂತೆ ಕಂಡುಬಂದಿರುವುದನ್ನು ಅಭಿಪ್ರಾಯಪಟ್ಟಿದೆ.

(i) ***ಮಹೇಂದ್ರ ಸಿಂಗ್ ಮತ್ತು ಮತ್ತೊಬ್ಬರು -ವಿರುದ್ಧ- ಮಧ್ಯಪ್ರದೇಶ ರಾಜ್ಯ*** [1], ಮಾಡಲಾದ ಆಪಾದನೆಯು ನನ್ನ ಅತ್ತೆ ಹಾಗೂ ಪತಿ ಮತ್ತು ಓರಗಿತ್ತಿ (ಗಂಡನ ಹಿರಿಯ ಅಣ್ಣನ ಹೆಂಡತಿ) ನನಗೆ ಕಿರುಕುಳ ನೀಡಿದರೆಂದು ಹೇಳಿರುವ ಮೃತರ ಮರಣಕಾಲೀನ ಹೇಳಿಕೆಯನ್ನು ಆದರಿಸಿದೆ. ಅವರು ನನ್ನನ್ನು ಹೊಡೆದು ನಿಂದಿಸಿದರು. ನನ್ನ ಪತಿ ಮಹೇಂದ್ರ ಎರಡನೇ ಮದುವೆಯಾಗಲು ಬಯಸಿದ್ದರು. ಇವನಿಗೆ ನನ್ನ ಓರಗಿತ್ತಿಯೊಂದಿಗೆ ಅಕ್ರಮ ಸಂಬಂಧವಿತ್ತು. ಈ ಕಾರಣಗಳಿಂದಾಗಿ ಕಿರುಕುಳ ನೀಡುತ್ತಿದ್ದು. ನಾನು ಬೆಂಕಿ ಹಚ್ಚಿಕೊಂಡು ಸಾಯಲು ಬಯಸುತ್ತೇನೆ. ಹಿಂದೆ ಸೂಚಿಸಲಾದ ಆಪಾದನೆಗಳ ಆಧಾರದ ಮೇಲೆ ಸರ್ವೋಚ್ಚ ನ್ಯಾಯಾಲಯವು,

1. 1995 ಎಸ್‌ಯುಪಿಪಿ(3) ಎಸ್‌ಸಿಸಿ 731

ಮೃತರು ನೀಡಿದ ಹೇಳಿಕೆಗಳ ಆಧಾರದ ಮೇಲೆ ದುಷ್ಪ್ರೇರಿತ ಅಂಶಗಳನ್ನು ಅದು ಗಮನಿಸಿಲ್ಲವೆಂಬ ನಿರ್ಣಯಕ್ಕೆ ಬರಲಾಗಿದೆ. ದುಷ್ಪ್ರೇರಣೆಯು ವ್ಯಕ್ತಿಯ ಆ ಕೆಲಸವನ್ನು ಮಾಡಲು ಚಿತಾವಣೆ ಮಾಡುವ ಪ್ರಕ್ರಿಯೆಯಾಗಿರುತ್ತದೆ ಅಥವಾ ಉದ್ದೇಶಪೂರ್ವಕವಾಗಿ ವ್ಯಕ್ತಿಗೆ ಸಹಾಯ ಮಾಡುವುದನ್ನು ಒಳಗೊಂಡಿರುತ್ತದೆ ಮತ್ತು ಚಿತಾವಣೆ ಮಾಡುವುದಕ್ಕೆ ಆಪಾದಿತನ ಕಡೆಯಿಂದ ಸಕಾರಾತ್ಮಕ ಕ್ರಿಯೆ ನಡೆದಿರದಿದ್ದರೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳಲು ಸಹಾಯ ಮಾಡಿರದಿದ್ದರೆ, ಅದು ಯಾವುದೇ ರೀತಿಯಲ್ಲಿ ಅಪರಾಧ ನಿರ್ಣಯವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿತ್ತು. ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಗಮನ ಸೆಳೆಯಲು ಅಪರಾಧ ಮಾಡುವುದಕ್ಕೆ ಸ್ಪಷ್ಟ ಆಪರಾಧಿಕ ಮನಸ್ಸು ಇರಬೇಕಾಗುತ್ತದೆಯೆಂದು ಮತ್ತೆ ಅಭಿಪ್ರಾಯಪಟ್ಟಿದೆ. ಮೃತರ ಕಿರುಕುಳದ ಹಿಂದೆ ಹೇಳಲಾದ ಅಪರಾಧದ ಆಧಾರದ ಮೇಲಷ್ಟೇ ಭಾರತ ದಂಡ ಸಂಹಿತೆಯ ಮೇರೆಗೆ ಅಪರಾಧ ನಿರ್ಣಯವನ್ನು ಮಾಡಿರುವುದನ್ನು ಹೇಳಲಾಗುವುದಿಲ್ಲ, ಕಾನೂನಿನಲ್ಲಿ ಇದನ್ನು ಹೆಚ್ಚು ಸಮರ್ಥಿಸಲಾಗುವುದಿಲ್ಲ.

(ii) ***ರಮೇಶ್ ಕುಮಾರ್ –ವಿರುದ್ಧ– ಛತ್ತೀಸ್‌ಗಡ ರಾಜ್ಯ***[2], ಪ್ರಕರಣವನ್ನು ಉಲ್ಲೇಖಿಸುವ ಅವಕಾಶ ಸಿಕ್ಕಿದ್ದು, ಇದರಲ್ಲಿ ಪತಿ–ಪತ್ನಿಯರ ನಡುವಿನ ವಿವಾದದಲ್ಲಿ, ಪತಿಯು, ನಿನ್ನಿಷ್ಟ ಬಂದ ಹಾಗೆ ಮಾಡು, ನಿನ್ನಿಷ್ಟ ಬಂದ ಕಡೆ ಹೋಗು ಎಂದು ಕಿರುಚಾಡಿದ್ದ. ಇದಾದನಂತರ, ಆಪಾದಿತನ ಹೆಂಡತಿಯು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ವಿಷಯವು ಸರ್ವೋಚ್ಚ ನ್ಯಾಯಾಲಯವನ್ನು ತಲುಪಿದಾಗ, 'ಪ್ರೇರೇಪಣೆ' ಎಂಬ ಅರ್ಥದ ವಿವಿಧ ಆಯಾಮಗಳನ್ನು ಪರಿಶೀಲಿಸುವ ಮೂಲಕ ಈ ಮುಂದಿನಂತೆ ಸವಿವರವಾಗಿ ತಿಳಿಸಲಾಗಿದೆ.

> ''20. 'ಯಾವುದೇ ಕಾರ್ಯ' ವೆಸಗಲು ಕೆಣಕುವುದು. ಪ್ರಚೋದಿಸುವುದು, ಕೆರಳಿಸುವುದು, ಪ್ರೇರೇಪಿಸುವುದು ಅಥವಾ ಉತ್ತೇಜಿಸುವುದು. ಅದನ್ನು ಪರಿಣಾಮಗೊಳಿಸುವುದಕ್ಕೆ ವಾಸ್ತವಿಕ ಪದಗಳನ್ನು ಬಳಸಲೇಬೇಕು ಎಂಬ ಅಥವಾ ಪ್ರೇರೇಪಿಸಲು ಅಗತ್ಯವಾಗಿ

2. (2001) 9 ಎಸ್‌ಸಿಸಿ 618

ಅಥವಾ ವಿಶೇಷವಾಗಿ ಯಾವ ಪದಗಳನ್ನು ಬಳಸಿದರು ಎಂಬುದರ ಅಗತ್ಯವಿರದಿದ್ದರೂ ಕೂಡ ಅದರ ಪರಿಣಾಮವನ್ನು ಸೂಚಿಸಬೇಕು. ಪರಿಣಾಮವನ್ನು ಪ್ರೇರೇಪಿಸುವ ಇನ್ನೂ ಒಂದು ಯುಕ್ತ ವಿಷಯವನ್ನು ತಿಳಿಸಲು ಸಮರ್ಥವಾಗಿರಬೇಕು. ಪ್ರಸ್ತುತ ಪ್ರಕರಣ ಒಂದು ವಿಷಯವಲ್ಲ, ಆಪಾದಿತನು ತನ್ನ ಕಾರ್ಯಗಳ ಅಥವಾ ಲೋಪದ ಮೂಲಕ ಅಥವಾ *ನಡತೆಯ ಕ್ರಮವನ್ನು ಮುಂದುವರಿಸುವ ಮೂಲಕ ಇಲ್ಲಿ, ಮೃತರಿಗೆ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ಬಿಟ್ಟು ಬೇರೆ ದಾರಿ ಇರಲಿಲ್ಲ ಎಂಬಂಥ ಸನ್ನಿವೇಶಗಳನ್ನು ಸೃಷ್ಟಿಸಿದ್ದಲ್ಲಿ ಈ ಪ್ರಕರಣದಲ್ಲಿ ಪ್ರೇರೇಪಣೆಯು ತೀರ್ಮಾನಕ್ಕೆ ಬರುವಂಥದಾಗಿರಬಹುದು. ವಾಸ್ತವವಾಗಿ ಪರಿಣಾಮದಿಂದ ಉಂಟಾಗುವುದರ ಉದ್ದೇಶವಿಲ್ಲದೆ ಕೋಪ ಅಥವಾ ಉದ್ವೇಗದಲ್ಲಿ ಕಿರುಚಿದ ಆ ಪದವನ್ನು ಪ್ರೇರೇಪಣೆ ಎಂದು ಹೇಳಲಾಗುವುದಿಲ್ಲ.*”

(ಒತ್ತು ನೀಡಲಾಗಿದೆ)

(iii) ***ಚಿತ್ರೇಶ್ ಕುಮಾರ್ ಚೋಪ್ರಾ –ವಿರುದ್ಧ– ರಾಜ್ಯ***[3], (ದೆಹಲಿಯ ಎನ್‌ಸಿಟಿ ಸರ್ಕಾರ) ಸರ್ವೋಚ್ಚ ನ್ಯಾಯಾಲಯಕ್ಕೆ ಈ ದುಷ್ಪ್ರೇರಣೆಗೆ ಸಂಬಂಧಪಟ್ಟ ಸಂಗತಿಗಳನ್ನು ವ್ಯವಹರಿಸುವ ಸಂದರ್ಭ ಬಂದಿದ್ದು, ನಂತರದಲ್ಲಿ ಆ ಕಾರ್ಯವನ್ನು ಮಾಡುವುದನ್ನು ಪ್ರಚೋದಿಸುವ, ಕೆರಳಿಸುವ ಅಥವಾ ಪ್ರೇರೇಪಿಸುವ ಉದ್ದೇಶವಿರಬೇಕು ಎಂದು ಅಭಿಪ್ರಾಯಪಟ್ಟಿದೆ. ಪ್ರತಿಯೊಬ್ಬ ವ್ಯಕ್ತಿಗಳ ಆತ್ಮಹತ್ಯೆ ಮಾಡಿಕೊಳ್ಳುವ ರೀತಿ ಮತ್ತೊಬ್ಬರಿಗಿಂತ ವಿಭಿನ್ನವಾಗಿದ್ದು, ಪ್ರತಿಯೊಬ್ಬ ವ್ಯಕ್ತಿಯು ತನ್ನ ಸ್ವಗೌರವಕ್ಕೆ ಬರುವ ಸ್ವಂತ ಕಲ್ಪನೆಯನ್ನು ಹೊಂದಿರುತ್ತದೆ ಮತ್ತು ಸ್ವಗೌರವವಿರುತ್ತದೆ ಮತ್ತು ಆದುದರಿಂದ ಅಂಥ ಪ್ರಕರಣಗಳನ್ನು ವ್ಯವಹರಿಸುವಾಗ ಯಾವುದೇ ಸಾದಾ ಸೀದಾ ಸೂತ್ರವನ್ನು ವಿಧಿಸಲು ಸಾಧ್ಯವಾಗುವುದಿಲ್ಲ ಮತ್ತು ಪ್ರತಿಯೊಂದು ಪ್ರಕರಣವನ್ನು ಅದರದೇ ಆದ ಸಂಗತಿಗಳು ಮತ್ತು ಸನ್ನಿವೇಶಗಳ ಆಧಾರದ ಮೇಲೆ ನಿರ್ಧರಿಸಬೇಕಾಗುತ್ತದೆ.

3. (2009) 11 ಸ್ಕೇಲ್ 24

(iv) ***ಪಶ್ಚಿಮ ಬಂಗಾಳ –ವಿರುದ್ಧ– ಓರಿಲಾಲ್ ಜೈಸ್ವಾಲ್ ಮತ್ತು ಮತ್ತೊಬ್ಬರು***[4], ಸರ್ವೋಚ್ಚ ನ್ಯಾಯಾಲಯವು ಪ್ರತಿಯೊಂದು ಸಂಗತಿಗಳು ಮತ್ತು ಸನ್ನಿವೇಶಗಳನ್ನು ನಿರ್ಧರಿಸುವಲ್ಲಿ ಮತ್ತು ಗಾಯಾಳುವಿನ ಮಿತಿಮೀರಿದ ಕ್ರೂರತೆಯು ಆತ್ಮಹತ್ಯೆ ಮಾಡಿಕೊಂಡು ಜೀವವನ್ನು ಮುಕ್ತಾಯಗೊಳಿಸಲು ವಾಸ್ತವವಾಗಿ ಅವಳನ್ನು ಪ್ರಚೋದಿಸಿದೆಯೇ ಎಂಬ ನಿರ್ಣಯದ ಉದ್ದೇಶದ ಸಂಬಂಧದಲ್ಲಿ ಸಾಕ್ಷ್ಯವು ಆಧಾರ ಒದಗಿಸುವುದನ್ನು ನಿರ್ಧರಿಸುವಲ್ಲಿ ನ್ಯಾಯಾಲಯವು ತುಂಬಾ ಜಾಗರೂಕವಾಗಿರಬೇಕೆಂದು ಎಚ್ಚರಿಸಿದೆ. ಸಾಮಾನ್ಯವಾದ ಮುಂಗೋಪಕ್ಕೆ, ಜಗಳ ಮತ್ತು ಸಮಾಜದಲ್ಲಿ ಸಾಮಾನ್ಯವಾಗಿ ಆಗುವ ಗೃಹಜೀವನದಲ್ಲಾದ ಭಿನ್ನಾಭಿಪ್ರಾಯದಿಂದ ಗಾಯಾಳು ಮಾಡಿಕೊಂಡ ಆತ್ಮಹತ್ಯೆ ಅತೀ ಸೂಕ್ಷ್ಮದ್ದಾಗಿದೆಯೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ಇದಕ್ಕೆ ಅಂಥ ಮುಂಗೋಪ, ಜಗಳ ಭಿನ್ನಾಭಿಪ್ರಾಯವನ್ನು ಆತ್ಮಹತ್ಯೆ ಮಾಡಿಕೊಳ್ಳಲು ಸದೃಶವಾಗಿ ಸಮಾಜವು ನೀಡಿದ ಪ್ರತ್ಯೇಕ ಸನ್ನಿವೇಶವಾಗಿದೆಯೆಂದು ಹೇಳಲಾಗುವುದಿಲ್ಲ. ನ್ಯಾಯಾಲಯದ ಅಂತಃಸಾಕ್ಷಿಗೆ ಆತ್ಮಹತ್ಯೆಯ ಅಪರಾಧವನ್ನು ದುಷ್ಪ್ರೇರಿಸುವ ಅಪರಾಧಕ್ಕೆ ಆಪಾದಿತನು ತಪ್ಪಿತಸ್ಥನಾಗಿ ಕಂಡುಬಂದ ನಿರ್ಣಯದ ಆಧಾರದ ಮೇಲೆ ಮನದಟ್ಟಾಗದಿರುವುದು.

6. ಮತ್ತೊಂದು ಕಡೆ ಮಾನ್ಯ ಎಚ್‌ಸಿಜಿಪಿ ಶ್ರೀ ಬಿ. ವಿಶ್ವೇಶ್ವರಯ್ಯನವರು ಪ್ರಶ್ನಿತ ತೀರ್ಪನ್ನು ಸಮರ್ಥಿಸಿದ್ದಾರೆ ಮತ್ತು ಅಪೀಲನ್ನು ವಜಾಗೊಳಿಸಲು ಕೋರಿದ್ದಾರೆ.

7. ದಾಖಲೆಯನ್ನು ಅವಲೋಕಿಸಲಾಗಿದೆ. ಎದುರುದಾರರ ವಾದಗಳನ್ನು ಗಮನದಲ್ಲಿಟ್ಟುಕೊಂಡು, ಪರಿಗಣನೆಯ ಅಂಶಕ್ಕಾಗಿ, *ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಆಪಾದಿತ ಸಂ.6 ಮತ್ತು 13 ಇವರು ದುಷ್ಪ್ರೇರಿತರಾಗಿದ್ದಾರೆಂದು ಪ್ರಾಸಿಕ್ಯೂಷನ್ನು ರುಜುವಾತುಪಡಿಸಿದೆಯೇ”*

8. ಅಧಿವಿಚಾರಣಾ ನ್ಯಾಯಾಲಯವು, 1, 4, 5, 7 ಮತ್ತು 8ನೇ ಪ್ರಾಸಾಗಳ ಸಾಕ್ಷ್ಯವು ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳಲು 1 ರಿಂದ 5, 7 ರಿಂದ 12 ಮತ್ತು 14ನೇ ಸಂಖ್ಯೆಯ ಆಪಾದಿತರು ದುಷ್ಪ್ರೇರಿಸಿದ್ದಾರೆ ಅಥವಾ ಚಿತಾವಣೆ

4. (1994) 1 ಎಸ್‌ಸಿಸಿ 73

ಮಾಡಿದ್ದಾರೆಂದು ರುಜುವಾತುಪಡಿಸಿರುವುದಿಲ್ಲ. ಆದಾಗ್ಯೂ, ಪ್ರಾಸಿಕ್ಯೂಷನ್ನು ಪ್ರಾಸಾ 1 ರಿಂದ 4, 5, 7 ಮತ್ತು 8 ರ ಸಾಕ್ಷ್ಯವನ್ನು ಸಾಬೀತುಪಡಿಸಿದೆಯೆಂದು, 6 ಮತ್ತು 13ನೇ ಸಂಖ್ಯೆಯ ಆಪಾದಿತರ ನಡುವೆ ಮತ್ತು ಕೃತ್ಯಗಳು, ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳಲು ಪ್ರೇರೇಪಿಸಿದೆಯೆಂಬುದನ್ನು ರುಜುವಾತುಪಡಿಸಿದೆಯೆಂದು ಅಧಿವಿಚಾರಣಾ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

9. ಹಿಂದೆ ಹೇಳಲಾದ ಅಪರಾಧಗಳಿಗಾಗಿ ಅಪೀಲುದಾರರೊಂದಿಗೆ (ಸಂಘದ ನೌಕರರು) ಆರೋಪಿಗಳಾಗಿದ್ದ 1 ರಿಂದ 5, 7 ರಿಂದ 12 ಮತ್ತು 14 ರ (ಎಂದರೆ, ಸಂಘದ ಆಡಳಿತ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು) ಸಂಬಂಧದಲ್ಲಿ ಅಧಿವಿಚಾರಣಾ ನ್ಯಾಯಾಲಯವು ಖುಲಾಸೆ ಮಾಡಿದ ತೀರ್ಪಿನ ವಿರುದ್ಧ ರಾಜ್ಯವು ಅಪೀಲನ್ನು ಹೂಡಿರುವುದಿಲ್ಲ.

10. ಭಾರತ ದಂಡ ಸಂಹಿತೆಯ 306ನೇ ಪ್ರಕರಣವು, ಆತ್ಮಹತ್ಯೆಯ ದುಷ್ಪ್ರೇರಣೆಗೆ ಸಂಬಂಧಿಸಿದೆ ಮತ್ತು ಭಾರತ ದಂಡ ಸಂಹಿತೆಯ 107ನೇ ಪ್ರಕರಣವು ದುಷ್ಪ್ರೇರಣಾ ವಿಷಯಕ್ಕೆ ಸಂಬಂಧಪಟ್ಟಿರುತ್ತದೆ. ***ಕಿಶೋರಿಲಾಲ್ –ವಿರುದ್ಧ– ಮಧ್ಯಪ್ರದೇಶ ರಾಜ್ಯ*** [5], ಸರ್ವೋಚ್ಚ ನ್ಯಾಯಾಲಯವು ಭಾರತ ದಂಡ ಸಂಹಿತೆಯ 107ನೇ ಪ್ರಕರಣದಲ್ಲಿ ಕಾನೂನಿನ ಸ್ಪಷ್ಟ ವಿವರಣೆಯಿದೆ.

> "6. ಭಾರತ ದಂಡ ಸಂಹಿತೆಯ 107ನೇ ಪ್ರಕರಣವು ದುಷ್ಪ್ರೇರಣೆ ಎಂಬ ವಿಷಯವನ್ನು ಪರಿಭಾಷಿಸುತ್ತದೆ. ದುಷ್ಪ್ರೇರಣೆ ಅಪರಾಧವನ್ನು ಭಾರತ ದಂಡ ಸಂಹಿತೆಯಲ್ಲಿ ಉಪಬಂಧಿಸಲಾಗಿದ್ದು, ಪ್ರತ್ಯೇಕವಾದ ಮತ್ತು ವಿಭಿನ್ನ ವಿಷಯವಾಗಿದೆ. (1) ಯಾರೇ ವ್ಯಕ್ತಿಯನ್ನು ಅವನು ಆ ಕೆಲಸವನ್ನು ಮಾಡಲು ದುಷ್ಪ್ರೇರಿಸಿದಾಗ, ಅಥವಾ (2) ಆ ಕೆಲಸವನ್ನು ಮಾಡುವ ಸಂಬಂಧದಲ್ಲಿ ಯಾವುದೇ ಪಿತೂರಿಯನ್ನು ಮಾಡಲು ಒಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ತೊಡಗಿದಾಗ, ಅಥವಾ (3) ಆ ಕಾರ್ಯವನ್ನು ಮಾಡಲು ಯಾವುದೇ ಕೃತ್ಯದ

5. 2007 (10) ಎಸ್‌ಸಿಸಿ 797

ಮೂಲದ ಅಥವಾ ಕಾನೂನುಬಾಹಿರ ಕಾರ್ಯಲೋಪದ ಮೂಲಕ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದಾಗ, ಆ ವ್ಯಕ್ತಿಯು ಆ ಕಾರ್ಯವನ್ನು ಮಾಡಲು ದುಷ್ಪ್ರೇರಿಸಿದಂತೆ. ದುಷ್ಪ್ರೇರಣೆಯನ್ನು ಸಂಪೂರ್ಣ ಅಪರಾಧವೆನ್ನಲು ಈ ವಸ್ತುಗಳು ಅವಶ್ಯವಾಗುತ್ತವೆ. ''ಚಿತಾವಣೆ'' ಎಂಬ ಪದವು, ಯಾವುದೇ ಕಾರ್ಯವನ್ನು ಮಾಡಲು ಅಕ್ಷರಶಃ ಪ್ರಚೋದಿಸುವುದು ಕೆರಳಿಸುವುದು ಅಥವಾ ಪ್ರೇರೇಪಿಸುವುದು ಅಥವಾ ಒಡಂಬಡಿಸುವ ಮೂಲಕ ಆಗಮಾಡಿಸುವುದು. 107ನೇ ಪ್ರಕರಣದ ಮೂರು ಖಂಡಗಳಲ್ಲಿ ಉಪಬಂಧಿಸಲಾಗಿದೆ ದುಷ್ಪ್ರೇರಣೆಯು ಚಿತಾವಣೆ ಮಾಡುವ ಮೂಲಕ ಪಿತೂರಿ ನಡೆಸುವುದು ಅಥವಾ ಉದ್ದೇಶಪೂರ್ವಕವಾಗಿ ಸಹಾಯುಮಾಡುವುದು. ದುಷ್ಪ್ರೇರಕ ಪರಿಣಾಮ ಬೀರುವ ದುಷ್ಪ್ರೇರಕವಾದ ಕೃತ್ಯವನ್ನು ಎಸಗಿದರೆ, ಮತ್ತು ಅಂಥ ದುಷ್ಪ್ರೇರಣೆ ಶಿಕ್ಷೆಗೆ ಸಂಬಂಧಿಸಿದ ಉಪಬಂಧ ಇಲ್ಲದಿದ್ದರೆ, ಆಗ ಅಪರಾಧಿಯನ್ನು ಮೂಲ ಅಪರಾಧಕ್ಕೆ ಸಂಬಂಧಿಸಿದಂತೆ ಉಪಬಂಧಿಸಲಾದ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆಂಬುದನ್ನು 109ನೇ ಪ್ರಕರಣವು ಉಪಬಂಧಿಸುತ್ತದೆ. 109ನೇ ಪ್ರಕರಣದಲ್ಲಿ ''ದುಷ್ಪ್ರೇರಣೆ'' ಎಂದರೆ, ನಿರ್ದಿಷ್ಟ ಅಪರಾಧಕ್ಕೆ ದುಷ್ಪ್ರೇರಿಸುವುದಾಗಿದೆ. ಆದ್ದರಿಂದ ಯಾವ ದುಷ್ಪ್ರೇರಣೆಗೆ ದುಷ್ಪ್ರೇರಿಸಿರುವನೆಂದು ವ್ಯಕ್ತಿಯನ್ನು ಆರೋಪಿಸಲಾಗಿದೆಯೋ ಆ ದುಷ್ಪ್ರೇರಣೆಗೆ ಸಂಬಂಧಿಸಿದ ಅಪರಾಧವನ್ನು ಸಾಮಾನ್ಯವಾಗಿ ಅಪರಾಧದ ರುಜುವಾತಿಗೆ ಸೇರಿಸಲಾಗುತ್ತದೆ.''

11. ***ರಣಧೀರ್ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ– ಪಂಜಾಬ್ ರಾಜ್ಯ***[6], ಭಾರತ ದಂಡ ಸಂಹಿತೆಯ 306ನೇ ಪ್ರಕರಣಕ್ಕೆ ಸಂಬಂಧಿಸಿದ ಕಾನೂನು ಸ್ಥಾನವನ್ನು ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಇತ್ಯರ್ಥಪಡಿಸಿದೆ.

> "12. ದುಷ್ಪ್ರೇರಣೆಯು, ವ್ಯಕ್ತಿಯನ್ನು ಚಿತಾವಣೆ ಮಾಡುವ ಮಾನಸಿಕ ಪ್ರಕ್ರಿಯೆಯನ್ನು ಅಥವಾ ಯಾವುದೇ ಕಾರ್ಯವನ್ನು ಮಾಡಲು ಆ ವ್ಯಕ್ತಿಗೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವುದನ್ನು ಒಳಗೊಳ್ಳುತ್ತದೆ. ಪಿತೂರಿಯ ಪ್ರಕರಣಗಳಲ್ಲೂ ಕೂಡ ಇದು ಆ ಕಾರ್ಯವನ್ನು ಮಾಡಲು ಪಿತೂರಿಯನ್ನು ನಡೆಸುವ ಮಾನಸಿಕ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ. ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ಅಪರಾಧ ಮಾಡಲು ದುಷ್ಪ್ರೇರಿಸಲಾಗಿದೆಯೆಂದು ಹೇಳಬಹುದಾಗಿರುವ ವ್ಯಕ್ತಿಯ ಮುಂದೆ ಆ ಕಾರ್ಯವನ್ನು ಮಾಡಲು ಚಿತಾವಣೆ ಮಾಡಿರುವ ಹಾಗೆ ಅಥವಾ ಸಹಾಯ ಮಾಡಿರುವ ಹಾಗೆ ವಿವರಿಸಬಹುದಾದ ಅಪಾರವಾದ ಕ್ರಿಯಾತ್ಮಕ ಪಾತ್ರವನ್ನು, ವ್ಯಕ್ತಿಯ ಮುಂದೆ ಮಾಡಿರಬೇಕು."

12. ***ಅಲಮೇಂಡು ಪಾಲ್ ಅಲಿಯಾಸ್ ಜಂತು -ವಿರುದ್ಧ- ಪಶ್ಚಿಮ ಬಂಗಾಳ ರಾಜ್ಯ***[7], ರ ಪ್ರಕರಣದಲ್ಲಿ ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ಅಪರಾಧದ ತಪ್ಪಿತಸ್ಥರಾದ ಆಪಾದಿತನ ಮುಂದೆ ಮಾಡಲಾಗಿದೆಯೆಂದು ಭಾವಿಸಿರುವುದಕ್ಕೆ ಸಂಬಂಧಿಸಿದಂತೆ ಪೂರ್ವ ನಿರ್ಣಯದ ಸಮೀಕ್ಷೆಯನ್ನು ಮಾಡಿದ ನಂತರ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ.

> "12. ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ಆಪಾದಿತನು ಹಾಗೆ ಅಪರಾಧದ ತಪ್ಪಿತಸ್ಥನೆಂದು ಅಭಿಪ್ರಾಯ ಪಡುವ ಮೊದಲು, ನ್ಯಾಯಾಲಯವು ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕು ಮತ್ತು ಗಾಯಾಳು ತನ್ನ ಜೀವವನ್ನು ಕೊನೆಗೊಳ್ಳುವುದನ್ನು ಬಿಟ್ಟರೆ ಬೇರೆ ಯಾವ ಆಯ್ಕೆಯೂ ಅವನಿಗೆ ಉಳಿದಿರಲಿಲ್ಲವೆಂಬುದನ್ನು ನೋಡುವ ಕ್ರೂರತೆ ಮತ್ತು ಕಿರುಕುಳವನ್ನು ನೀಡಿದ್ದನೇ ಎಂಬುದನ್ನು

6. (2004) 13 ಎಸ್‌ಸಿಸಿ 129

7. (2010), ಎಸ್‌ಸಿಸಿ 707

> ಗುರುತಿಸುವ ಸಲುವಾಗಿ ಇದರ ಮುಂದೆ ನೀಡಲಾದ ಸಾಕ್ಷ್ಯವನ್ನು ಸಹ ನಿರ್ಧರಿಸಬೇಕು ಎಂಬ ದೃಷ್ಟಿಕೋನವನ್ನು ಈ ನ್ಯಾಯಾಲಯವು ಸುಸಂಗತವಾಗಿ ತೆಗೆದುಕೊಂಡಿದೆ. ಆತ್ಮಹತ್ಯೆಗೆ ಆರೋಪಿಸಲಾದ ದುಷ್ಪ್ರೇರಣೆ ಸಂದರ್ಭಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಚಿತಾವಣೆ ಮಾಡಿದ ಪ್ರತ್ಯಕ್ಷ ಅಥವಾ ಪರೋಕ್ಷ ರುಜುವಾತು ಇರಲೇಬೇಕು ಎಂಬುದನ್ನು ಸಹ ಮನಸ್ಸಿನಲ್ಲಿಟ್ಟುಕೊಳ್ಳಬೇಕು. ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾದ ಅಥವಾ ಆ ಕಾರ್ಯಕ್ಕೆ ನೂಕಿದ ಅದು ನಡೆಯುವ ಸಮಯಕ್ಕೆ ಆಪಾದಿತನ ಕಡೆಯಿಂದ ಯಾವುದೇ ನಿಕಟ ಸಕಾರಾತ್ಮಕ ಕ್ರಿಯೆ ಇಲ್ಲದಿದ್ದು, ಮಾಡಲಾದ ಕೇವಲ ಕಿರುಕುಳದ ಆರೋಪವನ್ನು ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ನಿಬಂಧನೆಗಳಲ್ಲಿನ ಅಪರಾಧ ನಿರ್ಣಯವು ಸಮರ್ಥಿಸುವುದಿಲ್ಲ."
>
> (ಒತ್ತು ನೀಡಲಾಗಿದೆ)

13. ***ಎಂ. ಮೋಹನ್ –ವಿರುದ್ಧ– ರಾಜ್ಯ***[8], ಈ ಮುಂದಿನಂತೆ ಅಭಿಪ್ರಾಯ ಪಡಲಾಗಿದೆ.

> 45. ದುಷ್ಪ್ರೇರಣೆಯು, ವ್ಯಕ್ತಿಯು ಅದನ್ನು ಮಾಡಲು ವ್ಯಕ್ತಿಯನ್ನು ಚಿತಾವಣೆ ಮಾಡಿದ ಅಥವಾ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದ ಮಾನಸಿಕ ಪ್ರಕ್ರಿಯೆಯನ್ನು ಒಳಗೊಳ್ಳುತ್ತದೆ. ಆತ್ಮಹತ್ಯೆ ಮಾಡಿಕೊಳ್ಳುವಂತೆ ಚಿತಾವಣೆ ಮಾಡಲು ಅಥವಾ ಸಹಾಯಕವಾಗಲು ಆಪಾದಿತನ ಕಡೆಯಿಂದ ಸಕಾರಾತ್ಮಕ ಕೆಲಸ ಆಗದಿರುವ ಅಪರಾಧ ನಿರ್ಣಯವನ್ನು ಸಮರ್ಥಿಸಲಾಗುವುದಿಲ್ಲ.
>
> 46. ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ವ್ಯಕ್ತಿಯ ಅಪರಾಧ ನಿರ್ಣಯ ಮಾಡುವ ಸಲುವಾಗಿ, ಅಪರಾಧ

8. 2011 ಕ್ರಿಮಿನಲ್ ಎಲ್.ಜೆ. 1900

ಮಾಡಲು ಇದ್ದ ಅಪರಾಧಿಕ ಮನಸ್ಸನ್ನು ಸ್ಪಷ್ಟಪಡಿಸಬೇಕಾಗುತ್ತದೆ ಎಂಬುದನ್ನು ಕಾನೂನಿನ ಸದುದ್ದೇಶ ಮತ್ತು ಈ ನ್ಯಾಯಾಲಯವು ನಿರ್ಣಯಿಸಿದ ಪ್ರಕರಣಗಳ ಅನುಪಾತವು, ಸ್ಪಷ್ಟಪಡಿಸುತ್ತದೆ. ಮೃತನು ಯಾವುದೇ ದಾರಿ ಕಾಣದೆ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿರುವ ಸಕಾರಾತ್ಮಕ ಕೆಲಸ ಅಥವಾ ನೇರ ಕೆಲಸವು ಸಹ ಬೇಕಾಗುತ್ತದೆ ಮತ್ತು ಅವನು/ಅವಳು ಆತ್ಮಹತ್ಯೆ ಮಾಡಿಕೊಳ್ಳಲು ಅಂಥ ಸನ್ನಿವೇಶದೊಳಕ್ಕೆ ಮೃತನನ್ನು ದೂಡಲು ಈ ಕಾರ್ಯ ಸಹ ಕಾರಣವಾಗಿರಬೇಕಾಗುತ್ತದೆ.”

14. ಪ್ರಸ್ತುತ ಪ್ರಕರಣದಲ್ಲಿ, ದಿನಾಂಕ 01.04.2007 ರಂದು ಎಲ್ಲಾ ಆರೋಪಿತರು ಪದ್ಮಮ್ಮನನ್ನು ದೂಷಿಸಿದರೆಂದು ಮತ್ತು 13ನೇ ಸಂಖ್ಯೆಯ ಆಪಾದಿತನು 6ನೇ ಸಂಖ್ಯೆಯ ಆಪಾದಿತರನ್ನು ಪದ್ಮಮ್ಮನ ಮೇಲೆ ಕೈಮಾಡಲು ಚಿತಾವಣೆ ಮಾಡಿದರೆಂದು, ತದನುಸಾರವಾಗಿ 6ನೇ ಸಂಖ್ಯೆಯ ಆಪಾದಿತರು ಪದ್ಮಮ್ಮನ ಮುಖಕ್ಕೆ ಉಗಿದರೆಂದು, ಹಾಲಿನ ಡಬ್ಬದಿಂದ ಸಹ ಅವಳನ್ನು ಹೊಡೆದು ಅವಳನ್ನು ಅಪಮಾನಗೊಳಿಸಿದರು ಎಂಬುದು ಪ್ರಾಸಿಕ್ಯೂಷನ್‌ನ ಆಪಾದನೆಯಾಗಿದೆ. ಅಲ್ಲದೆ, ದಿನಾಂಕ 02.04.2007 ರಂದು ಉತ್ಪಾದಕರಿಂದ ಹಾಲನ್ನು ಪಡೆದುಕೊಳ್ಳಲು ಪದ್ಮಮ್ಮನಿಗೆ ಆಪಾದಿತ ಸಂ.1 ವಹಿಯನ್ನು ನೀಡಿರಲಿಲ್ಲವೆಂದು ಮತ್ತು ಎಲ್ಲಾ ಆಪಾದಿತರು ಹೊಲಸು ಮತ್ತು ಅಸಭ್ಯ ಭಾಷೆಯಲ್ಲಿ ಪದ್ಮಮ್ಮನನ್ನು ಹೀಯಾಳಿಸಿದರೆಂದು, ಇದರ ಪರಿಣಾಮವಾಗಿ, ಪದ್ಮಮ್ಮನು 03.04.2007 ರಂದು ಬೆಳಿಗ್ಗೆ ಸುಮಾರು 5.30 ರಲ್ಲಿ ಆತ್ಮಹತ್ಯೆ ಮಾಡಿಕೊಂಡರೆಂದು ಮತ್ತೆ ಆರೋಪಿಸಿದೆ. ಅಧಿವಿಚಾರಣಾ ನ್ಯಾಯಾಲಯವು, 5 ರಿಂದ 7 ನೇ ಸಂಖ್ಯೆಯ ಮತ್ತು 7 ರಿಂದ 12 ನೇ ಸಂಖ್ಯೆಯ ಮತ್ತು 14ನೇ ಸಂಖ್ಯೆಯ ಆಪಾದಿತರ ವಿರುದ್ಧ ಮಾಡಿದ ಎಲ್ಲಾ ಆಪಾದನೆಗಳನ್ನು ನಂಬದೆ, ಆರೋಪಿಸಲಾದ ಅಪರಾಧಗಳಿಂದ ಅವರನ್ನು ಖುಲಾಸೆಗೊಳಿಸಿತ್ತು.

15. ನಿಶಾನೆ ಪಿ2 ರ ಪ್ರಕಾರ 03.04.2007 ರಂದು ಪ್ರಾಸಾ – 1 ದೂರನ್ನು ನೀಡಿರುತ್ತಾರೆ. ನಿಶಾನೆ ಪಿ9 ರ ಪ್ರಕಾರ ಪ್ರಥಮ ಮಾಹಿತಿ ವರದಿಯನ್ನು

ದಾಖಲಿಸಲಾಗಿತ್ತು. ಪದ್ಮಮ್ಮನು ಕರ್ತವ್ಯಕ್ಕೆ ಹಾಜರಾಗಲು ಬಿಡಲಿಲ್ಲವೆಂದು ಮತ್ತು 6ನೇ ಸಂಖ್ಯೆಯ ಆಪಾದಿತರು ಪದ್ಮಮ್ಮನ ಮುಖಕ್ಕೆ ಉಗಿದರೆಂದು ಮತ್ತು 01.4.2007 ರಂದು ಎಂದರೆ 13ನೇ ಸಂಖ್ಯೆಯ ಆಪಾದಿತನು ಚಿತಾವಣೆ ಮಾಡಿದ ಮೇಲೆ ಹಾಲಿನ ಡಬ್ಬದಿಂದ ಅವಳಿಗೆ ಹೊಡೆಯಲು ಪ್ರಯತ್ನಿಸಿದರು ಎಂಬುದು ಆರೋಪವಾಗಿದೆ. ಸದರಿ ಘಟನೆಗೆ ಸಂಬಂಧಿಸಿದಂತೆ ಪದ್ಮಮ್ಮನು ಯಾವುದೇ ದೂರನ್ನು ನೀಡಿರಲಿಲ್ಲ. 02.04.2007 ರಂದು, ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಜೀವನವನ್ನು ಮುಗಿಸಲು 6 ಮತ್ತು 13ನೇ ಸಂಖ್ಯೆಯ ಆಪಾದಿತರು ಪ್ರಚೋದಿಸಿರಲಿಲ್ಲ ಮತ್ತು ಪ್ರೇರೇಪಿಸಿರಲಿಲ್ಲ ಎಂಬುದಾಗಿದೆ. ಪದ್ಮಮ್ಮನು ಯಾವುದೇ ಮರಣ ಟಿಪ್ಪಣಿ (ಡೆತ್‌ನೋಟನ್ನು) ಬಿಟ್ಟುಹೋಗಿಲ್ಲ. ಆಪಾದಿತ ಘಟನೆಯು ನಡೆದಾಗ 01.04.2007 ರಂದು 10 ರಿಂದ 20 ರವರೆಗಿನ ವ್ಯಕ್ತಿಗಳು ಇರಲಿಲ್ಲವೆಂಬುದನ್ನು ಪ್ರಾಸಾ 1ರ ಸಾಕ್ಷ್ಯವು ತೋರಿಸುತ್ತದೆ. 01.04.2007ರ ಆಪಾದಿತ ಘಟನೆಗೆ ಸಂಬಂಧಿಸಿದಂತೆ ಯಾವುದೇ ಪ್ರತ್ಯೇಕ ಸಾಕ್ಷಿದಾರ ಹೇಳಿಕೆ ನೀಡಿಲ್ಲ. 13ನೇ ಸಂಖ್ಯೆಯ ಆಪಾದಿತಳು ತನ್ನ ಕೃತ್ಯದ ಮೂಲಕ 6ನೇ ಸಂಖ್ಯೆಯ ಆಪಾದಿತಳನ್ನು ಚಿತಾವಣೆ ಮಾಡಿದ್ದಾಳೆಂದು, 6ನೇ ಸಂಖ್ಯೆಯ ಆಪಾದಿತಳು ಅದರಿಂದಾಗಿ ಪದ್ಮಮ್ಮನ ಮುಖದ ಮೇಲೆ ಉಗಿದು, ಹಾಲಿನ ಡಬ್ಬದಿಂದ ಅವಳನ್ನು ಹೊಡೆದಿದ್ದಾಳೆ ಮತ್ತು ಆ ಕೃತ್ಯದಿಂದ ಪ್ರಚೋದಿತಳಾದ ಪದ್ಮಮ್ಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ರುಜುವಾತುಪಡಿಸಲು ಯಾವುದೇ ನಂಬಲರ್ಹವಾದ ಸಾಕ್ಷ್ಯಾಧಾರವಿಲ್ಲ.

16. ಪ್ರಾಸಿಕ್ಯೂಷನ್ ದಾಖಲೆಯಲ್ಲಿಟ್ಟಿರುವ ಸಾಕ್ಷ್ಯಾಧಾರದಿಂದ 1 ರಿಂದ 5 ರ ವರೆಗಿನ, 7 ರಿಂದ 12 ರ ವರೆಗಿನ ಮತ್ತು 14ನೇ ಸಂಖ್ಯೆಗಳ ಆಪಾದಿತರ ವಿರುದ್ಧದ ಪ್ರಕರಣವನ್ನು ನಂಬಲಾಗುತ್ತಿಲ್ಲ. ಅಧಿವಿಚಾರಣಾ ನ್ಯಾಯಾಧೀಶರು 6 ಮತ್ತು 13ನೇ ಸಂಖ್ಯೆಯ ಆಪಾದಿತರು, ಅಪರಾಧ ನಿರ್ಣಯದ ತೀರ್ಪನ್ನು ಹೊರಡಿಸಲು ಆರೋಪಿಸಲಾದ ಅಪರಾಧದ ತಪ್ಪಿತಸ್ಥರೆಂದು ಕಂಡುಬಂದಿರುವರು ಎಂಬುದು ಯಾವ ಆಧಾರದ ಮೇಲೆ ನಂಬಲರ್ಹವಾದ ಸಾಕ್ಷ್ಯವಾಗಿರುವುದೋ ಆ ಸಾಕ್ಷ್ಯವು ನಂಬಲರ್ಹವಾಗಿರುವುದಿಲ್ಲ. ಪದ್ಮಮ್ಮನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಅಪೀಲುದಾರರ ಕಡೆಯಿಂದ ಆಗಿರುವ ಚಿತಾವಣೆ ಅಥವಾ ಸಹಾಯ ಮಾಡಿರುವ

ಯಾವುದೇ ಸಕಾರಾತ್ಮಕ ಕಾರ್ಯ ನಡೆದಿರುವುದಿಲ್ಲ, 6 ಮತ್ತು 13ನೇ ಸಂಖ್ಯೆಯ ಆಪಾದಿತರ ವಿರುದ್ಧ ಅಧಿವಿಚಾರಣಾ ನ್ಯಾಯಾಲಯವು ದಾಖಲಿಸಿದ ಅಪರಾಧದ ನಿರ್ಣಯವು ವ್ಯತಿರಿಕ್ತವಾಗಿದೆ. ಪ್ರಾಸಿಕ್ಯೂಷನ್ನಿನ ಎಲ್ಲಾ ಯುಕ್ತ ಸಂದೇಹಗಳನ್ನು ದಾಟಿ ಪ್ರಕರಣವನ್ನು ರುಜುವಾತುಪಡಿಸಿವುದಿಲ್ಲ. 6 ಮತ್ತು 13ನೇ ಸಂಖ್ಯೆಯ ಆಪಾದಿತನು ಸಂದೇಹದ ಪ್ರಯೋಜನವನ್ನು ಪಡೆದುಕೊಳ್ಳುವ ಹಕ್ಕುಳ್ಳವರಾಗಿದ್ದಾರೆ.

17. ವಿಷಯದ ಎಲ್ಲಾ ಕೋನಗಳನ್ನು ಪರಿಗಣನೆಗೆ ತೆಗೆದುಕೊಂಡು ಭಾರತ ದಂಡ ಸಂಹಿತೆಯ 306ನೇ ಪ್ರಕರಣದ ಮೇರೆಗೆ ಅಪರಾಧವನ್ನು ರುಜುವಾತುಪಡಿಸುವಲ್ಲಿ ಪ್ರಾಸಿಕ್ಯೂಷನ್ ಸಫಲವಾಗಿರುವುದಿಲ್ಲ. ತಪ್ಪಿತಸ್ಥರೆಂದು 6 ಮತ್ತು 13ನೇ ಸಂಖ್ಯೆಯ ಆಪಾದಿತರು ಅಭಿಪ್ರಾಯ ಪಟ್ಟಿರುವ, ದೋಷಗಳಿಂದ ಕೂಡಿರುವ, ಪ್ರಶ್ನಿತ ತೀರ್ಪನ್ನು ಸಮರ್ಥಿಸಲಾಗುವುದಿಲ್ಲ.

ಪರಿಣಾಮವಾಗಿ, ಅಪೀಲನ್ನು ಪುರಸ್ಕರಿಸಲಾಗಿದ್ದು, ಅಪರಾಧ ನಿರ್ಣಯದ ತೀರ್ಪು ಮತ್ತು ಮೈಸೂರಿನ 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಎಸ್.ಸಿ.ಸಂ. 316/2007 ರಲ್ಲಿ 01.03.2010 ರಂದು ಹೊರಡಿಸಿದ ಶಿಕ್ಷೆಯ ಆದೇಶವನ್ನು ತಳ್ಳಿಹಾಕಲಾಗಿದೆ. ಅಪೀಲುದಾರರ ಜಾಮೀನು ಪತ್ರಗಳನ್ನು ರದ್ದುಗೊಳಿಸಲಾಗಿದೆ.

---